೨೦ ಜಿಲ್ಲಾ ಪರಿಷತ್ತುಗಳ ಅಸ್ತಿತ್ವದಿಂದ ಜಿಲ್ಲಾ ಆಸ್ಪತ್ರೆಗಳಿಗೆ ಔಷಧಿಗಳನ್ನು ಒದಗಿಸದೇ ಇರುವುದರ ಬಗ್ಗೆ.

SRI MALLIKARJUNA M. KARGE.—After the formation of Zilla Parishads in the State of Karnataka the Budget pertaining to the supply of Drugs to the various peripheral institutions in Rural Areas has been entrusted to the Zilla Parishads without consulting the Health Department.

Subsequently no drugs have been supplied to the Dist. Health and F.W. Offices, PAC, PHU etc., by way of Package Indents. Last supply of Drugs was made in the month of September, 1986 which was not of full Budget allotment. Subsequently drugs by way of package indents were supposed to be supplied during the month of April 1987. But it has not been supplied as the Budget has been used for some other purposes by the Zilla Parishads.

The poor people in the villages, rural areas are suffering due to the non availability of Drugs in the Hospitals including the Life saving Drugs. and Anti-biotics. Complaints are being received from various institutions regarding non-availability of life saving Drugs and also other general drugs.

Whether a decision has been taken regarding giving back the Budget pertaining to supply of Drugs to the Director of Health to enable supplies from the Govt. Medical Stores by way of Package Indent has been taken or not ? If a decision has been taken it has to be implemented on war-footing basis. Full quality of Drugs as per the Budget allotment to be supplied to the peripherals from Government Stores by way of Package Indent.

Additional Drugs can be supplied to them to the maximum from the reserved Budget of the Government Medical Stores due to the acute drought situation in the State.

If the Zilla Parishads take time in releasing funds to GMS for package indents, then the Director of Health and Family Welfare Services be directed to release the Reserve Funds and Supply Drugs from the GMS to Rural PHCs and PHUs by way of package indent, Immediately.

ಶ್ರೀ ಎಂ. ರಘುಪತಿ.—ಮಾನ್ಯ ಅಧ್ಯಕ್ಷರೇ, ಶ್ರೀ ಮಲ್ಲಿಕಾರ್ಜುನ ಖಾರ್ಗೆಯವರು ಕೊಟ್ಟಿರುವ ಸೂಚನೆಗೆ ಆರೋಗ್ಯ ಸಚಿವರ ಪರವಾಗಿ ಹೇಳಿಕೆಯನ್ನು ಕೊಡುತ್ತೇನೆ.

ರಾಜ್ಯದಲ್ಲಿರುವ ಸರ್ಕಾರಿ ಆಸ್ಪತ್ರೆಗಳಿಗೆ ಬೇಕಾದ ಔಷಧಿಗಳ ಪೈಕಿ ಶೇಕಡಾ ೬೦ರಷ್ಟು ಮೊತ್ತದ ಔಷಧಿಗಳನ್ನು ಬೆಂಗಳೂರಿನಲ್ಲಿರುವ ಸರ್ಕಾರಿ ಔಷಧಿ ಮಳಿಗೆಗಳಿಂದಲೂ ಉಳಿದ ಶೇಕಡಾ ೪೦ ರಷ್ಟು ಮೊತ್ತದ ಔಷಧಿಗಳನ್ನು ಆಸ್ಪತ್ರೆಗಳ ಅವಶ್ಯಕತೆಯನ್ನು ನೋಡಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಅಧಿಕಾರಿಗಳ ಮೂಲಕ ಖರೀದಿಸಲಾಗುವುದು.

ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರು ಇಲ್ಲಿಂದ ಔಷಧಿಗಳನ್ನು ಸರಬರಾಜು ಮಾಡಲು ಈ ಕೆಳಕಂಡಂತೆ ವೇಳಾ ಪಟ್ಟಿಯನ್ನು ನಿಗದಿಪಡಿಸಲಾಗಿದೆ.

ಏಪ್ರಿಲ್–ಮೇ	...	ವಾರ್ಷಿಕ ದಾಸ್ತಾನಿನ ತಾಳೆ ನೋಡುವುದು
ಜೂನ್–ಜುಲೈ	...	ಎಲ್ಲಾ ಜಿಲ್ಲೆಗಳ ದೊಡ್ಡ ಆಸ್ಪತ್ರೆಗಳು
ಆಗಸ್ಟ್	...	ಚಿತ್ರದುರ್ಗ, ಮಂಡ್ಯ, ಬಳ್ಳಾರಿ, ಹಾಸನ, ಕೊಡಗು
ಸೆಪ್ಟೆಂಬರ್	...	ತುಮಕೂರು, ಕೋಲಾರ, ಮೈಸೂರು, ಉತ್ತರ ಕನ್ನಡ, ಬೆಂಗಳೂರು (ನಗರ) ಬೆಂಗಳೂರು ಗ್ರಾಮೀಣ
ಅಕ್ಟೋಬರ್–ನವೆಂಬರ್	...	ಚಿಕ್ಕಮಗಳೂರು, ಬೆಳಗಾವಿ, ಮೈಸೂರು, ರಾಯಚೂರು, ದಕ್ಷಿಣ ಕನ್ನಡ ಧಾರವಾಡ
ಡಿಸೆಂಬರ್–ಜನವರಿ	...	ಗುಲ್ಬರ್ಗ, ಬೀದರ್, ಶಿವಮೊಗ್ಗ, ಬಿಜಾಪುರ
ಫೆಬ್ರುವರಿ–ಮಾರ್ಚ್	...	ಹೆಚ್ಚುವರಿ ಇಂಡೆಂಟ್‌ಗಳು

ಇದೂ ಅಲ್ಲದೆ ಜೂನ್ ತಿಂಗಳಿನಿಂದ ಡಿಸೆಂಬರ್ ಅಂತ್ಯದವರೆಗೆ ಪ್ರಾಥಮಿಕ ಆರೋಗ್ಯ ಘಟಕ ಹಾಗೂ ಉಪ ಕೇಂದ್ರಗಳಿಗೆ ಪ್ಯಾಕೇಜ್ ಇಂಡೆಂಟ್‌ಗಳನ್ನು ಕಳುಹಿಸಲು ವ್ಯವಸ್ಥೆ ಮಾಡಲಾಗಿದೆ. ತುರ್ತು ಅಗತ್ಯವಿದ್ದಲ್ಲಿ ವೇಳಾ ಪಟ್ಟಿಯನ್ನು ಸಡಿಲಗೊಳಿಸಲಾಗುತ್ತದೆ.

ಈಗ ರಾಜ್ಯದಲ್ಲಿ ಜಿಲ್ಲಾ ಪರಿಷತ್‌ಗಳು ಅಸ್ತಿತ್ವಕ್ಕೆ ಬಂದಿದ್ದರೂ ಸಹ ಔಷಧಿಗಳ ಸರಬರಾಜು ಮಾಡುವುದರ ಬಗ್ಗೆ ಹಾಲಿ ಇರುವ ಪದ್ಧತಿಯನ್ನೆ ಈ ವರ್ಷವೂ ಸಹ ಮುಂದುವರಿಸಿಕೊಂಡು ಹೋಗುವಂತೆ ತೀರ್ಮಾನಿಸಲಾಗಿದೆ. ಏಕೆಂದರೆ ಉತ್ತಮ ಹಾಗೂ ಗುಣಮಟ್ಟದ ಔಷಧಿಗಳನ್ನು ಸಾಧ್ಯವಾದಷ್ಟು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿ ಒದಗಿಸಲು ಸರ್ಕಾರಿ ಔಷಧಿ ಮಳಿಗೆಯಿಂದಲೇ ಅನುಕೂಲವಾಗುವುದು. ಈ ಸಾಲಿನಲ್ಲಿಜಿಲ್ಲಾ ಪರಿಷತ್‌ಗಳ ವ್ಯಾಪ್ತಿಗೆ ಬರುವ ಆಸ್ಪತ್ರೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಸಿಬ್ಬಂದಿ ವೇತನ, ಬೇಕಾಗುವ ಔಷಧ, ಆಹಾರ ಇತ್ಯಾದಿಗಳಿಗಾಗಿ ಆಯವ್ಯಯದಲ್ಲಿ ಆಯಾಯ ಜಿಲ್ಲಾ ಪರಿಷತ್‌ಗಳೇ ಹಣವನ್ನು ಒದಗಿಸಬೇಕಾಗಿದೆ. ಸರ್ಕಾರಿ ಔಷಧ ಮಳಿಗೆಯಿಂದ ಸರಬರಾಜು ಮಾಡುವ ಔಷಧಿಗಳಿಗೆ ತಗಲುವ ವೆಚ್ಚವನ್ನು ಆಯಾಯ ಜಿಲ್ಲಾ ಪರಿಷತ್ತಿನ ಆಯವ್ಯಯದಿಂದ ಭರಿಸಬೇಕಾಗುತ್ತದೆ. ಇದರಂತೆ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೂ ನಿರ್ದೇಶನಾಲಯದಿಂದ ಪತ್ರ ಬರೆದು ಔಷಧಿಗಳ ಸರಬರಾಜಿಗಾಗಿ ಹಣವನ್ನು ಬಿಡುಗಡೆ ಮಾಡುವಂತೆ ಕೋರಲಾಗಿದೆ. ಕೆಲವು ಆಸ್ಪತ್ರೆಗಳಲ್ಲಿ ಔಷಧಿಗಳು ಕೊರತೆ ಇರುವುದು ತಿಳಿದುಬಂದಿದ್ದರಿಂದ ಸರ್ಕಾರಿ ಔಷಧಿ ಮಳಿಗೆಯ ದಾಸ್ತಾನಿನಲ್ಲಿ ಮೀಸಲಾಗಿಟ್ಟಿರುವ ಔಷಧಿಗಳ ಪೈಕಿ ಪ್ರತಿಯೊಂದು ಜಿಲ್ಲಾ ಪರಿಷತ್‌ಗೆ ೫.೦೦ ಲಕ್ಷ ರೂ.ಗಳು ಬೆಲೆ ಬಾಳುವ ತುರ್ತು ಚಿಕಿತ್ಸೆಗಾಗಿ ಹಾಗೂ ಜೀವ ರಕ್ಷಣೆಗಾಗಿ ಬೇಕಾಗುವ ಔಷಧಿಗಳನ್ನು ಪಡೆಯಲು ಎಲ್ಲಾ ಜಿಲ್ಲಾ ಆರೋಗ್ಯ ಮತ್ತು ಕುಟುಂಬಕ ಲ್ಯಾಣ ಅಧಿಕಾರಿಗಳಿಗೆ ದಿನಾಂಕ ೧–೮–೮೭ ರಂದು ಸೂಚನೆಗಳನ್ನು ಕೊಡಲಾಗಿದೆ. ಆದರಿಂದ ಇಂಡೆಂಟ್‌ಗಳು ಬಂದ ತಕ್ಷಣ ಔಷಧಿಗಳನ್ನು ಸರಬರಾಜು ಮಾಡಲಾಗುವುದು.

21. ಬಸವನಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮದ ಮುಳುಗಡೆ ಆಗಲಿದ್ದು ಪರಿಹಾರ ಕೊಡುವಲ್ಲಿ ವಿಳಂಬ ಮಾಡುತ್ತಿರುವ ಬಗ್ಗೆ

ಶ್ರೀ ಎಸ್ ಜಿ ನಂಜಯ್ಯನವಮತ್.–ಮಾನ್ಯ ಅಧ್ಯಕ್ಷರೇ, ವಿಜಾಪುರ ಜಿಲ್ಲೆಯ ಬಸವನಬಾಗೇವಾಡಿ ತಾಲ್ಲೂಕಿನ ಕೋಲಾರ ಗ್ರಾಮದ ಕೃಷ್ಣಾ ಮೇಲ್ದಂಡೆ ಯೋಜನೆ ಅಲಮಟ್ಟಿಯಲ್ಲಿ ಮುಳುಗಡೆ ಆಗಲಿದೆ. ಈ ವಿಷಯವಾಗಿ ಕರ್ನಾಟಕ ಸರ್ಕಾರದ ವತಿಯಿಂದ ಸರ್ಕಾರಿ ಪರಿಪತ್ರ ಕ (೧) ನೋಟೀಸು ತಾರೀಖು ತಾರೀಖಿನ ಮಾರ್ಚ್ ೧, ೧೯೮೪ ರಂದು ಜಾರಿಯಾಗಿರುತ್ತೆ ನಂತರ ಕ (೧) ನೋಟೀಸ್‌ನ ತಾರೀಖು ೩೧–೭–೧೮೮೬ರಂದು ಪುನಃ ಪ್ರಕಟಣೆಯಾಗಿರುತ್ತದೆ. ಅಲ್ಲದೆ ತಾರೀಖು ೨೨–೮–೧೯೮೭ ರಂದು ಕ (೧) ನೋಟೀಸುಗಳನ್ನು ಕೂಡಾ ಗ್ರಾಮದ ಜನರಿಗೆ ಹಂಚುವ ಕಾರ್ಯ ಮುಗಿದಿರುತ್ತದೆ. ಅಲ್ಲದೆ ಮನೆಗಳ ಕೊನೆಯ ಅಳತೆಯ ಕಾರ್ಯ ಕೂಡಾ ಮುಗಿಸಿರುತ್ತಾರೆ. ಈಗಾಗಲೇ ಕೋಲಾರ ಪುನರ್ವಸತಿ ಕೇಂದ್ರವು ಸುಮಾರು ೨೫೦ ಎಕರೆ ಜಾಗದಲ್ಲಿ ತಯಾರು ಆಗಿರುತ್ತದೆ. ಹೀಗಿದ್ದು ಈಗ ಅಲ್ಲಿಯ ಜನರು ಸದರಿ ಪರಿಹಾರ ಧನದ ಬೇಡಿಕೆಯ ಕುರಿತು ತಾರೀಖು ೯–೩–೮೭ ಹಾಗೂ ತಾರೀಖು